
**ನಾಂದಿಪದ**



ಕಲೆ: ಎಸ್.ವಿ. ಹೂಗಾರ್

# ಹಾಡು ಅರಳುವ ಸಮಯ

ಹಸಿಗೋಡೆಯ ಹರಳಿನಂತೆ ಓದುಗರ ಮನಸ್ಸಿನಲ್ಲಿ ಕವಿತೆಯ ಸಾಲುಗಳು ಅಚ್ಚಳಿಯದೆ ಉಳಿಯುವುದಕ್ಕೆ ಪ್ರಮುಖ ಕಾರಣ, ಕಾವ್ಯದಲ್ಲಿನ ಗೇಯ ಗುಣ. ಹಾಡುವ ಗುಣ ಹೊಂದಿರುವ ಕವಿತೆಯನ್ನು ನೆನಪಿನಲ್ಲಿಟ್ಟುಕೊಳ್ಳುವುದು ಸುಲಭ. ಅರ್ಥ ತಿಳಿಯದೆ ಹೋದರೂ, ಗೇಯತೆಯ ಕಾರಣದಿಂದಾಗಿಯೇ ಹಲವು ಹಾಡುಗಳು, ಕಾವ್ಯಗಳು ನಾಲಗೆಗಳಲ್ಲಿ ಉಳಿದುಬಂದಿವೆ. ಅರ್ಥದ ಸಾಧ್ಯತೆಗಳೇ ಮುಖ್ಯವಾಗಿ, ಗೇಯತೆ ಹಿನ್ನೆಲೆಗೆ ಸರಿದಾಗ, ಕವಿತೆ ಇಷ್ಟವಾದರೂ ಅದರ ಸಾಲುಗಳು ನೆನಪಿನಲ್ಲಿ ಉಳಿಯುವುದು ಕಷ್ಟ. ಇತ್ತೀಚಿನ ವರ್ಷಗಳಲ್ಲಂತೂ ಕನ್ನಡ ಕಾವ್ಯ ವೈಚಾರಿಕತೆಗೆ ಹೆಚ್ಚು ಒತ್ತುಕೊಟ್ಟಿದೆ. ಇದರ ಪರಿಣಾಮವಾಗಿ ಗೇಯ ಗುಣದ 'ಹಾಡುವ ಕವಿತೆ'ಗಳು ತೀರಾ ವಿರಳವಾಗಿವೆ; ಗದ್ಯ ಹಾಗೂ ಪದ್ಯದ ನಡುವಿನ ವ್ಯತ್ಯಾಸವೂ ತೆಳುವಾಗಿದೆ. ಲಯಬದ್ಧ ಕವಿತೆಗಳ ಕೊರತೆಯ ಕಾಲದಲ್ಲಿ, ನಾಲಿಗೆ ಮತ್ತು ಕಿವಿಗೆ ಹಿತವೆನ್ನಿಸಬಹುದಾದ ಕೆಲವು ರಚನೆಗಳನ್ನು 'ಮಯೂರ'ದ ಈ ಸಂಚಿಕೆ ಒಳಗೊಂಡಿದೆ. ನಮ್ಮ ಕೋರಿಕೆಯ ಮೇರೆಗೆ ಕನ್ನಡ ಕವಿಗಳು ಹಾಡಲಿಕ್ಕೆ ಅನುಕೂಲಕರವಾಗುವಂತೆ ರಚಿಸಿಕೊಟ್ಟಿರುವ ರಚನೆಗಳು ಒಂದು ಪ್ರಯೋಗದ ರೀತಿಯಲ್ಲಿ ಓದುಗರಿಗೂ ರುಚಿಸಬಹುದೆನ್ನುವ ವಿಶ್ವಾಸ ನಮ್ಮದು. ಸಾಹಿತ್ಯ ಪ್ರಕಾರವೊಂದು ಮಗ್ಗುಲು ಬದಲಿಸಲಿಕ್ಕೆ ಇಂಥ ಪ್ರಯೋಗಗಳು ಆಗಿಂದಾಗ್ಗೆ ನಡೆಯುವುದು ಅಗತ್ಯ.

ಜನಪ್ರಿಯತೆ ಮತ್ತು ಜನಪರತೆ ಎರಡರ ಸಮತೋಲನದ ವಿಶಿಷ್ಟ ಬರಹಗಾರ ಕೆ.ಟಿ. ಗಟ್ಟಿ ನಿಧನರಾಗಿದ್ದಾರೆ. ಕನ್ನಡ ಕಾದಂಬರಿಲೋಕಕ್ಕೆ ಹೊಸ ಹೊಳಪು ತಂದುಕೊಟ್ಟಿದ್ದ ಅವರ ಅನುಭವದ ಕೊಡುಗೆ ಭಾಷಾಶಾಸ್ತ್ರಕ್ಕೂ ಸಂದಿದೆ. ಈ ಅನನ್ಯ ಬರಹಗಾರನ ಬದುಕು–ಸಾಧನೆಯನ್ನು ಸ್ಮರಿಸುವ ಆರ್ದ್ರ ಬರಹವೊಂದು ಈ ಸಂಚಿಕೆಯಲ್ಲಿದೆ. ಗಟ್ಟಿ ಅವರ ಕೃತಿಗಳ ಮರು ಓದು ನಾವು ಅವರಿಗೆ ಸಲ್ಲಿಸಬಹುದಾದ ನಿಜವಾದ ಶ್ರದ್ಧಾಂಜಲಿ ಎನ್ನುವುದನ್ನು ಮರೆಯದೆ, ಈ ಬರಹ ನಮ್ಮ ಗಮನಕ್ಕೆ ತರುವಂತಿದೆ.

ಎಂದಿನಂತೆ ಜತನದಿಂದ ಆರಿಸಿ ನಿರೂಪಿಸಿರುವ ಕಥೆ, ಪ್ರಬಂಧ, ಸಂದರ್ಶನ, ವಿಮರ್ಶೆಯ ಬರಹಗಳು ಈ ಸಂಚಿಕೆಯಲ್ಲಿವೆ. ಹಲವು ರುಚಿಗಳ ಈ ಸಂಕಲನ, ಬೇಸಿಗೆಯ ಧಗೆ ಏರುತ್ತಲೇ ಇರುವ ದಿನಗಳಲ್ಲಿ ಸಹೃದಯರ ಮನಸ್ಸಿಗೆ ಕೊಂಚ ತಂಪು ತರಬಹುದು.

**ಮಯೂರ ಬಳಗ**
editormy@mayura.co.in